# ಖಾಸಗಿಯೋ ಸರ್ಕಾರಿಯೋ– ಒಂದಿಷ್ಟು ಚಿಂತನೆಗಳು

**–ಅರ್ಜುನ್ ಜಯದೇವ್**

೧೯೯೦ ರ ಕೊನೆಯ ಭಾಗದಲ್ಲಿ ನಾನು ಗ್ರಾಜುಯೇಟ್ ಸ್ಕೂಲ್‌ನಲ್ಲಿ ವ್ಯಾಸಂಗ ಮಾಡಲು ಅಮೆರಿಕೆಗೆ ಹೋದೆ. ತರುಣ ಗ್ರಾಜುಯೇಟ್ ವಿದ್ಯಾರ್ಥಿಗಳಿಗೆ ಸಾಮಾನ್ಯವಾಗಿ ಒಂದೇ ತರಗತಿಗಳಲ್ಲಿ ಒಟ್ಟಾಗಿ ಕಲಿಯುವಾಗ ಜೀವನದ ಬಗ್ಗೆ ಇರುವ ಸಮಾನ ಕಾತರಗಳಿಂದಾಗಿ ಪರಸ್ಪರ ಪ್ರೇರಣೆಯುಂಟಾಗುತ್ತದೆ ಹಾಗೂ ಸಮಾನ ಸಾಹಸ ಪ್ರಯತ್ನಗಳೂ ನಡೆಯುವುದರಿಂದ ಬಹುಮಟ್ಟಿಗೆ ಎಲ್ಲರ ಅನುಭವಗಳೂ ಒಂದೇ ಬಗೆಯದಾಗಿರುತ್ತದೆನ್ನಬಹುದು ಮತ್ತು ಅಂಥವನ್ನು ನಾವೆಲ್ಲರೂ ಒಂದೇ ರೀತಿಯಲ್ಲಿಯೇ ಎದುರಿಸುವುದೂ ಸಹಜವಾಗಿತ್ತು. ನನ್ನ ಸಹ ಗ್ರಾಜುಯೇಟ್ ವಿದ್ಯಾರ್ಥಿಗಳು ಕೆನಡಾ, ಯುಕೆ, ಚೀನಾ, ಯುರೋಪ್, ಕೊರಿಯ, ಟರ್ಕಿ ಹಾಗೂ ಅಮೆರಿಕ ದೇಶಗಳಿಗೆ ಸೇರಿದವರಾಗಿದ್ದರು. ಅವರೆಲ್ಲರ ಒಡನಾಟದಿಂದ ಉದ್ಭವಿಸಿದ ನನ್ನ ಅದಮ್ಯ ಅಭಿಲಾಷೆ ಹಾಗೂ ಚೈತನ್ಯವು ತರುವಾಯದ ಒಂದು ದಶಕಕ್ಕೂ ಹೆಚ್ಚಿನ ಅವಧಿಯಲ್ಲಿ ಕೂಡ ನನ್ನ ಜೀವನದಲ್ಲಿ ಅನುರಣಿಸುತ್ತಿತ್ತು. ಜೀವನವನ್ನು ಎದುರಿಸಲು ಅವರೆಲ್ಲರಿಗಿಂತ ಹೆಚ್ಚಿನ ಸಿದ್ಧತೆ, ಸಾಮರ್ಥ್ಯಗಳೇನೂ ನನ್ನಲ್ಲಿ ಇರಲಿಲ್ಲ. ಆದರೆ ನಾನು, ಇತರ ಹೆಚ್ಚಿನೆಲ್ಲಾ ದಕ್ಷಿಣ ಏಷ್ಯಾ ಉಪಖಂಡದಿಂದ ಬಂದ ವಿದ್ಯಾರ್ಥಿಗಳಂತೆ, ಖಾಸಗಿ ಶಾಲೆಯಲ್ಲಿ ಕಲಿತವನು ಹಾಗೂ ನನ್ನ ಇತರ ಸಹಾಧ್ಯಾಯಿಗಳು ಸರ್ಕಾರಿ ಶಾಲೆಗಳಲ್ಲಿ ಕಲಿತವರು ಎಂಬ ಮೂಲಭೂತವಾದ ಭಿನ್ನತೆ ಇತ್ತು ಎಂದು ಅನೇಕ ವರ್ಷಗಳ ನಂತರ ನನ್ನೊಬ್ಬ ಗ್ರಾಜುಯೇಟ್ ಒಡನಾಡಿಯೊಡನೆ ಮಾತನಾಡುತ್ತಿರುವಾಗ ನನ್ನ ಅರಿವಿಗೆ ಬಂತು. ಆದರೆ ಈ ಮಹತ್ವದ ಭಿನ್ನತೆಯು ನಮ್ಮ ಕೆಲಸದ ಸಂದರ್ಭದಲ್ಲಾಗಲಿ ಜೀವನದಲ್ಲಾಗಲಿ ಕಾಣಿಸಿಕೊಂಡಿರಲೇ ಇಲ್ಲ. ಮಾತ್ರವಲ್ಲ ತದನಂತರ ಬಾಲವಾಡಿ (ಕಿಂಡರ್‌ಗಾರ್ಟನ್)ಯಿಂದ ಆರಂಭಿಸಿ ಪಿಎಚ್‌ಡಿ ವರೆಗೂ ಜೀವನದುದ್ದಕ್ಕೂ ಸರ್ಕಾರಿ ಶಾಲಾ ವ್ಯವಸ್ಥೆಯಲ್ಲಿ ಶಿಕ್ಷಣ ಪಡೆದಿದ್ದ, ನನ್ನ ಸಹಪಾಠಿಗಳಲ್ಲೇ ಒಬ್ಬಳಾದ ಹುಡುಗಿಯನ್ನು ನಾನು ಮದುವೆಯಾದೆ.

ಹಲವಾರು ವರ್ಷಗಳ ನಂತರ ನನ್ನ ಮಗ ಅಮೆರಿಕೆಯಲ್ಲಿ ಶಾಲೆಗೆ ಸೇರಿದಾಗ ಅದು ಕೂಡ ದೇಶದಲ್ಲಿಯೇ ಅತ್ಯಂತ 'ಕಠಿಣತಮ'ವೆಂದು ಕುಖ್ಯಾತಿ ಪಡೆದಿದ್ದ ಜಿಲ್ಲೆಯಲ್ಲಿನ ಶಾಲೆಯಾಗಿತ್ತು. ಅಲ್ಲಿ ಅವನ ಮೊದಲ ವರ್ಷವು ಸವಾಲಿನದ್ದಾಗಿತ್ತು ಎಂಬುದು ನಿಜ. ಆದರೆ ನನಗೆ ಶಾಲೆಯಾಗಲಿ ಅಥವಾ ಇನ್ನೂ ನಿಖರವಾಗಿ ಹೇಳಬೇಕೆಂದರೆ ಆ ಶಾಲೆಯಲ್ಲಿನ ಮನುಷ್ಯರಾಗಲಿ ಅವನಿಗೆ ಶಿಕ್ಷಣ ನೀಡುವ ಮಹತ್ವದ ಉದ್ದೇಶದಲ್ಲಿ ವಿಫಲರಾಗಬಹುದೆಂದು ಒಮ್ಮೆಯೂ ಕೂಡ ಅನಿಸಿರಲೇ ಇಲ್ಲ. ಅಲ್ಲಿನ ಪ್ರತಿ ಶಿಕ್ಷಕನೂ ಪ್ರೀತಿಸುವ, ಅನುಕಂಪವುಳ್ಳ ಹಾಗೂ ಸದಾ ಕಾರ್ಯಮಗ್ನರಾದ, ಶೈಕ್ಷಣಿಕವಾಗಿ ಸಂಸ್ಕಾರವಂತರಾದ ಬೋಧಕರಾಗಿದ್ದರು. ದಶಕಗಳ ಹಿಂದೆ ನನಗೆ ದೊರೆಯುತ್ತಿದ್ದಂಥದೇ ಅಕ್ಕರೆ ಹಾಗೂ ಕಾಳಜಿಯಿಂದ ಅವರೆಲ್ಲರೂ ವಿದ್ಯಾರ್ಥಿಗಳೊಂದಿಗೆ ಸಂವಾದಿಸುತ್ತಿದ್ದರು.

ಅಮೆರಿಕ ಮತ್ತು ಭಾರತದಲ್ಲಿ ನಡೆಯುತ್ತಿರುವ ಖಾಸಗಿ ಮತ್ತು ಸರ್ಕಾರಿ ಶಿಕ್ಷಣ ವ್ಯವಸ್ಥೆಯ ಮೇಲಿನ ಚರ್ಚೆಗಳ ಹಿನ್ನೆಲೆಯಲ್ಲಿ ಈ ಸಂಗತಿಗಳ ಬಗ್ಗೆ ಆಲೋಚಿಸಿದಾಗ, ಶಿಕ್ಷಣದ ಉದ್ದೇಶಿತ ಫಲಿತಾಂಶಗಳ ದೃಷ್ಟಿಯಿಂದ ನೋಡಿದರೆ ಸರ್ಕಾರಿ/ಖಾಸಗಿ ಎಂಬ ಈ ದ್ವಂದ್ವದ ಕುರಿತು ಇಷ್ಟೆಲ್ಲಾ ಗೋಜಲು ಮಾಡಿಕೊಳ್ಳಬೇಕೇ ಎಂದು ಅನ್ನಿಸುತ್ತದೆ. ಇವೆರಡರ ನಡುವಣ ವ್ಯತ್ಯಾಸಗಳಲ್ಲಿ ಹೆಚ್ಚು ಪ್ರಸ್ತುತವಾದುದೆಂದರೆ ಒಂದೆಡೆ ಕಾರ್ಯನಿಮಗ್ನವಾದ, ಸಮರ್ಥವಾದ ಹಾಗೂ ಸ್ಪಂದನಶೀಲವಾದ ಸಮುದಾಯವು ಶಿಕ್ಷಣಕ್ಕೆ ಬಾಧ್ಯಸ್ಥವಾಗಿದೆ ಹಾಗೂ ಆ ಸಮುದಾಯ

ಬದಲಾವಣೆಗಳಿಗೆ ಒಗ್ಗುವಂತಹದಾಗಿದ್ದು ಭಿನ್ನತೆಗಳನ್ನು ನಿಭಾಯಿಸುವುದಕ್ಕೆ ಸಮರ್ಥವಾಗಿದೆ ಎಂಬುದೇ ಆಗಿದೆ. ಅಷ್ಟು ಮಾತ್ರವಲ್ಲ, ನನ್ನ ಮಗನು ಕಲಿಯುತ್ತಿದ್ದ ಸರ್ಕಾರಿ ಶಾಲೆಯಿದ್ದ ಪ್ರದೇಶದಲ್ಲಿದ್ದ ಪೋಷಕರು ಕಾರ್ಯತತ್ಪರರಾಗಿದ್ದರಲ್ಲದೆ ಶಿಕ್ಷಕರೊಂದಿಗೆ ಸಹನಶೀಲರಾಗಿ ಹಾಗೂ ಬೆಂಬಲಿಗರಾಗಿ ಇರುತ್ತಿದ್ದರು. ಅಲ್ಲದೆ ಅತ್ಯಂತ ಮುಖ್ಯವಾಗಿ, ಅವರೆಲ್ಲರೂ ಸಾಮಾಜಿಕ ಕಳಕಳಿ ಹಾಗೂ ಸಮುದಾಯ ಸಾಮರ್ಥ್ಯ ಹೊಂದಿದವರಾಗಿದ್ದರು. ಅದು ಜನಾಂಗೀಯವಾಗಿ ಹಾಗೂ ಶ್ರೀಮಂತ ಮತ್ತು ಬಡ ಜನರು ಸೇರಿರುವ ಸಂಮಿಶ್ರ ಪ್ರಾಂತ್ಯವಾಗಿದ್ದರೂ ಕೂಡ, ಮಕ್ಕಳ ಬಗ್ಗೆ ಸಾಮೂಹಿಕ ಜವಾಬ್ದಾರಿಯ ಅರಿವು ಅಲ್ಲಿತ್ತು.

ಹಾಗಿದ್ದರೆ, ಭಾರತದಲ್ಲಿ ಏಕೆ ಆ ಬಗೆಯ ಸಾಮುದಾಯಿಕ ಪ್ರಜ್ಞೆ ಪ್ರತಿಫಲನವಾಗುತ್ತಿಲ್ಲ? ಆದರೆ ಇದು ಭಾರತದ ಶಿಕ್ಷಣ ರಂಗದ ವಾಸ್ತವತೆ ಮಾತ್ರವೇ ಅಲ್ಲದೆ ಇಡೀ ಭಾರತೀಯ ಸಮಾಜದ ಗುಣಲಕ್ಷಣವೇ ಆಗಿದೆ ಎಂಬ ವ್ಯಾಪಕ ದೃಷ್ಟಿಯಿಂದ ನೋಡಬಹುದು. ಕೆಲವೊಂದು ತೊಂದರೆಗಳು ನಮ್ಮ ಒಟ್ಟಾರೆ ಸಾಮಾಜಿಕ ಸಾಮೂಹಿಕ ಪ್ರಜ್ಞೆಯ ಸ್ವರೂಪದಿಂದ ಹಾಗೂ 'ನಿಂತು ಹೊರಡುವ' ಮಾದರಿಯ, ದೇಸಿ ಆಗಿರುವ ಮತ್ತು ಅರೆ–ಬರೆ ಆಧುನಿಕತೆಯಿಂದ ಉಂಟಾಗುತ್ತವೆ ಎನ್ನಬಹುದು. ನಿಜವಾದ ಅರ್ಥದಲ್ಲಿ ಎಲ್ಲರನ್ನೂ ಒಳಪಡಿಸಿಕೊಳ್ಳದ ಈ ಸಾಮುದಾಯಿಕ ಪ್ರಜ್ಞೆಯ ಪರಿಣಾಮವಾಗಿ ಬಾಧೆಗೊಳಗಾದುದು ಶಿಕ್ಷಣ ರಂಗ ಮಾತ್ರವೇ ಅಲ್ಲ. ಜನರಿಗೆ ಸೌಲಭ್ಯಗಳನ್ನು ಕೊಡುವುದರಲ್ಲಿ ಹಿಂದೆ ಬಿದ್ದ ಸರಕಾರಿ ಕ್ಷೇತ್ರಗಳು ಭಾರತದಲ್ಲಿ ಅನೇಕ ಇವೆ. ವ್ಯಕ್ತಿಗಳು ಸಮುದಾಯವನ್ನು ಕಲ್ಪಿಸಿಕೊಳ್ಳುವ, ಹೊಕ್ಕು–ಬಳಕೆ ಮಾಡಿಕೊಳ್ಳುವ ಹಾಗೂ ಗುರುತಿಸಿಕೊಳ್ಳುವ ರೀತಿಗಳ ವೈವಿಧ್ಯತೆಯು ಸಮಾಜ ವಿಜ್ಞಾನದಲ್ಲಿ ಸಂಶೋಧನೆಗೆ ಒಳಪಡಬಹುದಾದ ಮುಖ್ಯ ವಿಷಯವಾಗುವುದರಲ್ಲಿ ಸಂಶಯವಿಲ್ಲ. ಈ ವಿಷಯಗಳು ಭಾರತದಲ್ಲಲ್ಲದೆ ಬೇರೆಲ್ಲೂ ಇಷ್ಟು ಸಂಕೀರ್ಣವೂ ವೈವಿಧ್ಯಮಯವೂ ಆಸಕ್ತಿದಾಯಕವೂ ಆಗಿ ಇರುವುದಿಲ್ಲ.

ಭಾರತದಲ್ಲಿ ಸಮಾನತೆಯ ಪರಿಕಲ್ಪನೆಯು ಸಾಮೂಹಿಕ ಪ್ರಜ್ಞೆಯ ಭಾಗವಾಗಿ ಅತ್ಯಂತ ದುರ್ಬಲ ಸ್ಥಿತಿಯಲ್ಲಿದೆ ಅನ್ನುವುದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ. ೯೦ ರ ದಶಕದ ಪ್ರಜಾಸತ್ತಾತ್ಮಕ ಏಳುಬೀಳುಗಳು ಹಾಗೂ ಅನಂತರ ಅವಕಾಶ ವಂಚಿತರಿಗಾಗಿ ಕೆಲವೊಂದು ರಾಜಕೀಯ ನೆಲೆಗಳನ್ನು ಸ್ಥಾಪಿಸಿಕೊಂಡಿದ್ದರೂ ನಾವು (ಅಂದರೆ ಮಧ್ಯಮವರ್ಗದವರು) ಇಡೀ ಸಮಾಜದ ಹಿತಕ್ಕೆ ಜವಾಬ್ದಾರರಾಗಬಹುದು, ಹಾಗೂ ಆಗಬೇಕು ಎಂಬ ಆಲೋಚನೆ ಸ್ವಲ್ಪಾಂಶ ಅನುಮಾನಕ್ಕೆ ಕಾರಣವಾಗಿದೆ. ಕನಿಷ್ಠ ಮಟ್ಟದಲ್ಲಾದರೂ ಗುಣಮಟ್ಟದ ಮೂಲಭೂತ ಸೌಲಭ್ಯಗಳನ್ನು, ಸಾರ್ವಜನಿಕ ಮೂಲಸವಲತ್ತುಗಳನ್ನು ಹಾಗೂ ಉತ್ತಮ ಆಡಳಿತವನ್ನು ಕೊಡುವುದಕ್ಕೆ ನಮ್ಮ ಸಮಾಜ ಹಾಗೂ ಸರಕಾರ ಜಂಟಿಯಾಗಿ ಸೋತಿರುವುದು ನಮ್ಮ ಭವಿಷ್ಯತ್ ಸಾಧ್ಯತೆಗಳ ಕಲ್ಪನೆಯನ್ನೇ ಭಗ್ನಗೊಳಿಸುತ್ತದೆ. (ಆದ್ದರಿಂದಲೇ ಆಗಿಂದಾಗ್ಗೆ ಕೇಳಿಸುವ "ಉತ್ತಮ ಆಡಳಿತ"ದ ಮಾತುಗಳು ಅತ್ಯಂತ ಆಕರ್ಷಕವಾಗಿರುತ್ತವೆ.) ಇದರಿಂದಾಗಿ ವ್ಯಕ್ತಿಯು ವಿಸ್ತರಿಸಬೇಕಾದ ಬಾಧ್ಯತೆಯನ್ನು ಹೊಂದಿರುವ ಸಮುದಾಯದ ಎಲ್ಲೆಗಳು ಸಂಕುಚಿತಗೊಳ್ಳುತ್ತವೆ. ಹೀಗಾಗಿ, ವ್ಯಕ್ತಿತ್ವ ವಿಕಸನದ ಅವಕಾಶಗಳಲ್ಲಿ ಸಮಾನತೆ ಇರಬೇಕು ಎಂಬ ಪರಿಕಲ್ಪನೆ ಅತ್ಯಂತ ಪೇಲವವಾಗಿದೆ. ಬೇರೆ ಮಾತಿನಲ್ಲಿ ಹೇಳಬೇಕೆಂದರೆ, ನಾವು ಸಾಮೂಹಿಕವಾಗಿ ಏಕತೆಯನ್ನು ಅನುಭವಿಸುವ ನೆಲೆಗಳು ಬಾಲಿವುಡ್ ಸಿನಿಮಾ ಹಾಗೂ ಕ್ರಿಕೆಟ್– ಇವರಡಕ್ಕೆ ಸೀಮಿತವಾಗಿರುವುದು ನಮ್ಮ ಅನುಭೂತಿಯ ಆಧಾರವು ಎಷ್ಟು ದುರ್ಬಲವಾದುದು ಎಂಬುದನ್ನು ಸೂಚಿಸುತ್ತದೆ.

ಇಷ್ಟನ್ನು ಹೇಳಿದ ಮೇಲೆ ಯೂಜೆನ್ ವೆಬರ್ ಮಾತನ್ನು ಸ್ವಲ್ಪ ತಿರುಚಿ ಹೇಳುವುದಾದರೆ 'ರೈತರನ್ನು ಭಾರತೀಯ'ರನ್ನಾಗಿ ಪರಿವರ್ತಿಸಬೇಕೆಂಬ ವಾದ ಇದಲ್ಲ. ಇಂದು ತುಲನಾತ್ಮಕವಾಗಿ ಏಕರೂಪವಾಗಿರುವ

ಐರೋಪ್ಯ ದೇಶಗಳಲ್ಲಿ 'ಸಾರ್ವತ್ರಿಕ' ಸ್ವರೂಪವನ್ನು ಸೃಜಿಸುವುದಕ್ಕೆ ಎರಡು ಮೂಲಭೂತ ಕಾರ್ಯತಂತ್ರಗಳನ್ನು ಆಧರಿಸಲಾಯಿತು. ಮೊದಲನೆಯದು, ದುಷ್ಟವಾದ ಕೋಮು ನಿರ್ವಂಶದ ಮೂಲಕ, ಹಿಂಸಾತ್ಮಕವಾದ ಗಡಿ ಬದಲಾವಣೆ ಮೂಲಕ, ಅಲ್ಪಸಂಖ್ಯಾತರ ಒತ್ತಾಯಪೂರ್ವಕ ಸಜಾತೀಕರಣದಿಂದ ಹಾಗೂ ಎರಡನೆಯದಾಗಿ ಸಂಘಟಿತ ಪರಿಶ್ರಮದ ಮೂಲಕ ರಾಷ್ಟ್ರದ ಸಾಮರ್ಥ್ಯವನ್ನು ಬಲಪಡಿಸುವುದು, ರಾಷ್ಟ್ರೀಯ ಅಸ್ಮಿತೆಯನ್ನು ಬೆಳೆಸುವುದು ಮತ್ತು ಭೂಮಾಲೀಕರು ಮತ್ತಿತರ ಪಾಳೇಗಾರಿ ಶಕ್ತಿಗಳನ್ನು ನಿವಾರಿಸುವುದು. ನಾವಾದರೋ ಈ ಎರಡನೇ ವರ್ಗದ ಪ್ರಯತ್ನಗಳಲ್ಲಿ ಸ್ವಲ್ಪಾಂಶ ಪ್ರಗತಿಯನ್ನು ಕಂಡಿದ್ದೇವಾದರೂ ಮೊದಲನೇ ವರ್ಗದ ಪ್ರಯತ್ನಗಳನ್ನು ಸಂಪೂರ್ಣವಾಗಿ ಅಳವಡಿಸಿಕೊಂಡಿಲ್ಲ. ಸಾರ್ವತ್ರಿಕತೆಯನ್ನು ಪ್ರತ್ಯೇಕತಾವಾದದ ನೆಲೆಯಲ್ಲಿ ಕಟ್ಟಬೇಕೆಂಬ ಬಯಕೆಯು ಒಪ್ಪತಕ್ಕದ್ದಲ್ಲ. ಏಕೆಂದರೆ ಈಗಾಗಲೇ ನಮ್ಮ ರಾಜಕಾರಣವು ಬಹುಮತೀಯವಾದದ ಅತಿ ಕೆಟ್ಟ ಅತಿರೇಕಗಳ ಬಲು ಸನಿಹಕ್ಕೆ, ಕೂದಲೆಳೆಯ ಅಂತರವನ್ನು ತಲಪಿರುತ್ತದೆ.

ಹಾಗಿದ್ದ ಮೇಲೆ ಶಿಕ್ಷಣದಂಥ ಸಾಮೂಹಿಕ ಸರಕುಗಳ ವಿತರಣೆಗೆ ಹಾಗೂ ಅಂಥ ಸರಕುಗಳಿಗೆ ಬೆಂಬಲ ನೀಡುವ ಸಾರ್ವತ್ರಿಕ ಸ್ವರೂಪದ ಕಾಲ್ಪನಿಕ ವ್ಯವಸ್ಥೆಯ ರಚನೆಯ ಬಗ್ಗೆ ಯೋಚಿಸಲು ಹೇಗೆ ತಾನೇ ಸಾಧ್ಯವಾದೀತು? ಈ ಹಿಂದಿನ ಇಂತಹ ಪ್ರಯತ್ನಗಳಿಗೆ ಯಶಸ್ಸು ದೊರೆಯದಿರುವುದರಿಂದಲೂ ಇಂದಿನ ಸನ್ನಿವೇಶದಲ್ಲಿ ಅದನ್ನು ಪ್ರಾರಂಭಿಸುವ ವಿಧಾನಗಳಿಂದ ಅಪಾಯಗಳು ಉಂಟಾಗಬಹುದಾದ್ದರಿಂದಲೂ ಇದು ಒಂದು ಸವಾಲೇ ಆಗಿದೆ. ಯಾವ ಬಗೆಯ ನಿರ್ದಿಷ್ಟ ಕಾರ್ಯನೀತಿಯನ್ನು ಅಳವಡಿಸಿಕೊಳ್ಳಬಹುದೆಂಬುದು ನನಗೆ ಖಚಿತವಿಲ್ಲವಾದರೂ ಕೆಲ ವಿಷಯಗಳಂತೂ ತುಂಬ ಸ್ಪಷ್ಟವಾಗಿವೆ. ಶಿಕ್ಷಣದಲ್ಲಾಗಲಿ, ಇತರೆ ಕ್ಷೇತ್ರಗಳಲ್ಲಾಗಲಿ ಸರ್ಕಾರಿ ವ್ಯವಸ್ಥೆಯು ಸೋಲುವುದು ಖಚಿತ, ಆದ್ದರಿಂದ ಖಾಸಗೀಕರಣವೊಂದೇ ಉಳಿದಿರುವ ಮಾರ್ಗ ಎಂಬುದು ತಪ್ಪು ಎಂಬುದು (ರಾಜಕೀಯವಾಗಿ ಸರಿಯಲ್ಲವಾದರೂ) ಯಾರೂ ಅಲ್ಲಗಳೆಯಲಾಗದ ವಾಸ್ತವವಾಗಿದೆ. ಇದನ್ನು ಸಮರ್ಥಿಸಲು ನಮ್ಮಲ್ಲಿ ಸಾಕಷ್ಟು ಪುರಾವೆಗಳಿವೆ. ಆಧುನಿಕರೂ ಸಮರ್ಥರೂ ಕಾರ್ಯಶೀಲರೂ ಆದ ವ್ಯಕ್ತಿಗಳನ್ನು ಸೃಜಿಸುವುದಕ್ಕೆ ಸರ್ಕಾರಿ ಶಿಕ್ಷಣವು ಖಂಡಿತ ಅಡ್ಡಿಯುಂಟು ಮಾಡುವುದಿಲ್ಲ ಎಂಬುದಕ್ಕೆ ನನ್ನ ಗ್ರಾಜುಯೇಟ್ ಸಹಪಾಠಿಗಳೇ ನಿದರ್ಶನ.

ಇದು ಭಾರತದಲ್ಲಿನ ಸರ್ಕಾರಿ ಶಿಕ್ಷಣ ಮತ್ತು ಶಾಲೆಗಳ ದುಃಸ್ಥಿತಿಯನ್ನು ಮರೆಮಾಚುವ ಪ್ರಯತ್ನವಲ್ಲ; ಹೋಲಿಕೆಯನ್ನು ಸಮಾನಸ್ಥಿತಿಯಲ್ಲಿ ಇರುವವುಗಳ ನಡುವೆ ಮಾಡಬೇಕು ಎಂಬುದನ್ನು ಸೂಚಿಸಲು ಮಾತ್ರ. ಭಾರತದ ಮಧ್ಯಮವರ್ಗದ ಜನರು ಉತ್ತಮ ಮಾನವ ಸಂಪನ್ಮೂಲ ಹಾಗೂ ಮೂಲಭೂತ ಸೌಕರ್ಯಗಳಿರುವ ಶಾಲೆಗಳಲ್ಲಿ ತಮ್ಮ ಮಕ್ಕಳಿಗೆ ವಿದ್ಯೆ ಕೊಡಿಸಲು ಶಕ್ತರಾಗಿದ್ದಾರೆ ಎಂಬುದರಲ್ಲಿ ಸಂದೇಹವೇನೂ ಇಲ್ಲ. ಆದರೆ ಸಮಾನತೆಯ ನೆಲೆಯಲ್ಲಿ ಪರಸ್ಪರ ಹೋಲಿಕೆ ಮಾಡಿದಾಗ ಖಾಸಗಿ ಶಾಲೆಗಳು ಖಂಡಿತವಾಗಿಯೂ ಸರ್ಕಾರಿ ಶಾಲೆಗಳಿಗಿಂತ ಉತ್ತಮ ಅನ್ನಲಾಗುವುದಿಲ್ಲ. ಇತ್ತೀಚೆಗೆ ಆಂಧ್ರಪ್ರದೇಶದಲ್ಲಿ ನಡೆಸಲಾದ ಕಡಿಮೆ ಶುಲ್ಕದ ಖಾಸಗಿ ಶಾಲೆಗಳ ಯಾದೃಚ್ಛಿಕ ಪರೀಕ್ಷೆಯಲ್ಲಿ (ಮುರಳೀಧರನ್ ಮತ್ತು ಸುಂದರಾಮನ್, ೨೦೧೫, ಕರೋಪಾಡಿ ೨೦೧೫) ಅಥವಾ ಪ್ರಾಚಿ ಶ್ರೀವಾತ್ಸವ ಅವರ ಹೆಚ್ಚು ವಿಸ್ತಾರವಾದ ಅಧ್ಯಯನದಲ್ಲಿ (ಹೆಚ್ಚಿನ ಮಾಹಿತಿಗೆ, ಶ್ರೀವಾತ್ಸವ, ೨೦೧೩ ನೋಡಿ) ಇದು ಖಚಿತಗೊಂಡಿದೆ. ಶಾಲೆಗಳ ನಡುವಣ ವ್ಯತ್ಯಾಸಗಳು ಹೆಚ್ಚು ಸ್ಫುಟಗೊಳ್ಳುವುದು ಅವುಗಳಿಗೆ ಸಂಬಂಧಿಸಿದ ಸಮುದಾಯದ ಆಸಕ್ತಿ ಮತ್ತು ಒಟ್ಟಾರೆ ಸಂಪನ್ಮೂಲಗಳಲ್ಲಿ.

ಕಾನೂನು ಸಿದ್ಧಾಂತಕಾರ ರಾಬರ್ಟೊ ಉಂಗರ್‌ನ ಅಭಿಪ್ರಾಯದಂತೆ ''ಪ್ರಜಾತಂತ್ರಾತ್ಮಕ ಪ್ರಯೋಗಶೀಲತೆ'' (ಆಜಟಂಳಿಡಿಚಿಣಯಳಿ ಜಥಿಂಜಡುಟಜಟಣಚಿಟ್ಸುಟ) ಸಂಭವಿಸಬೇಕು. ಸರ್ಕಾರಿ ಹಾಗೂ ಖಾಸಗೀವಲಯಗಳಂಥ

ಮಾನವ ಸಾಮಾಜಿಕ ಸಂಸ್ಥೆಗಳು ಕಟ್ಟುನಿಟ್ಟಾದ ಹಾಗೂ ಪೂರ್ವನಿರ್ಧರಿತ ಸಾಂಸ್ಥಿಕ ಚೌಕಟ್ಟಿಗೆ ಸೀಮಿತವಾಗಿರದೆ ಪ್ರಯೋಗಶೀಲತೆ ಹಾಗೂ ಪರಿಷ್ಕರಣೆಗೆ ಮುಕ್ತವಾಗಿರುವುದು ಅವಶ್ಯವೆಂಬುದು ಅವನ ಅಭಿಪ್ರಾಯ. ಭಾರತೀಯ ಸಂದರ್ಭದಲ್ಲಿ ಅಂಥ ಪ್ರಯೋಗಶೀಲತೆಗೆ ವಿಪುಲ ಅವಕಾಶಗಳಿವೆ. ಶಿಕ್ಷಣದ ಮೂಲಭೂತ ಮಾನವಿಕ ಉದ್ದೇಶವನ್ನು ನೆರವೇರಿಸಬಲ್ಲಂಥ ಸಾಂಸ್ಥಿಕ ಹಾಗೂ ಶೈಕ್ಷಣಿಕ ಸಂಸ್ಥೆಗಳ ಅನೇಕ ರೂಪಗಳನ್ನು ನಾವು ಪರಿಕಲ್ಪಿಸಬಹುದು. ಅಷ್ಟೇ ಅಲ್ಲ, ಈಗಾಗಲೇ ಆರ್‌ಟಿಇ ಅಥವಾ ಲೋಕವಿದ್ಯಾ ಪ್ರಕಾರದಂಥ ಬದಲಿ ಸಾಮಾಜಿಕ ಕಾರ್ಯನೀತಿಗಳ ಮೂಲಕವಾಗಿಯಾಗಲಿ ಅಂಥ ಹಲವಾರು ಪ್ರಯೋಗಗಳನ್ನು ನಡೆಸಲಾಗುತ್ತಿದೆ. ಏನೇ ಆದರೂ, ವಿಭಾಗ ಯಾವುದೇ ಇರಲಿ, ಉತ್ತಮ ಶಿಕ್ಷಣ ನೀಡಿ ಯುವಪೀಳಿಗೆಯನ್ನು ತಯಾರುಮಾಡಲು ಈ ಬಗೆಯ ಪ್ರಯೋಗಗಳನ್ನು ಮಾಡಲು ಸಿದ್ಧರಾದ ನಿಷ್ಠರೂ ಕ್ರಿಯಾಶೀಲರೂ ಆದ ಜನರ ಗುಂಪಿನ ಅವಶ್ಯಕತೆಯಿದೆ. ಇಂತಹ ಮುತುವರ್ಜಿಯ ಒಟ್ಟಾರೆ ಜವಾಬ್ದಾರಿ ಇಡೀ ಸಮಾಜದ್ದೇ ಆಗಿರುತ್ತದೆ.

ಗ್ರಾಜುಯೇಟ್ ಶಾಲೆಯ ಪ್ರಾರಂಭಿಕ ಸಮಯದಲ್ಲಿ ನಾನೂ ಕೂಡ ಇಟಲಿಯ ವೈಚಾರಿಕ ಲೇಖಕ ಆಂಟೋನಿಯೊ ಗ್ರ್ಯಾಮ್‌ಸ್ಕಿಯ ಮಾತುಗಳನ್ನು ಓದಿದ್ದೆ – ''ಯಾರೊಬ್ಬರ ಬಗ್ಗೆಯೂ ಅಷ್ಟೇಕೆ ತನ್ನ ಸ್ವಂತ ತಾಯ್ತಂದೆಯರ ಬಗ್ಗೆ ಕೂಡ ಗಾಢವಾದ ಆರ್ದ್ರ ಭಾವನೆಗಳನ್ನು ಹೊಂದಿರದ ಒಬ್ಬ ವ್ಯಕ್ತಿ ಜನಸಮೂಹದೊಂದಿಗೆ ಅಂತಹ ಸಂಪರ್ಕ ಹೊಂದುವುದು ನಿಜವಾಗಿಯೂ ಹೇಗೆ ಸಾಧ್ಯವಾದೀತು ಎಂದು ಎಷ್ಟೋ ಸಲ ಅಚ್ಚರಿಪಟ್ಟಿದ್ದೇನೆ. ಪ್ರತಿಯೊಬ್ಬ ಮಾನವ ಜೀವಿಯಿಂದ ಮತ್ತೊಬ್ಬ ವ್ಯಕ್ತಿಯನ್ನು ಆಳವಾಗಿ ಪ್ರೀತಿಸುವುದು ಸಾಧ್ಯವಾಗದಿದ್ದರೆ ಸಮೂಹದಲ್ಲಿ ಏಕತೆ ಹೊಂದುವುದು ಸಾಧ್ಯವಾಗುವುದೇ?'' (೧೯೬೫ ರ ಫಿಯೋರಿಯಲ್ಲಿ ಉದ್ಧೃತ) ಈ ಉದ್ಧೃತ ವಾಕ್ಯ ನನ್ನ ಮನಸ್ಸಿನಲ್ಲಿ ಅನೇಕ ವರ್ಷಗಳಿಂದಲೂ ಉಳಿದುಬಿಟ್ಟಿದೆ. ಅಷ್ಟೇ ಅಲ್ಲ ನನ್ನ ಒಟ್ಟಾರೆ ಆಲೋಚನೆಗಳಿಗೂ ಕೂಡ ಅದು ಸಂಗತ ಅನ್ನಬಹುದಾಗಿದೆ. ವಾಸ್ತವಿಕವಾದ ಅರ್ಥಪೂರ್ಣ ಸಾರ್ವಜನಿಕ ಪ್ರಜ್ಞೆಯನ್ನು ಸೃಜಿಸಬೇಕಾದರೆ, ಅದನ್ನು ಪ್ರೀತಿ ಹಾಗೂ ಕಾಳಜಿಯಿಂದ ಪ್ರಾರಂಭಿಸಬೇಕು. ಶಿಕ್ಷಣದ ಗುರಿಯು ಆ ಉದ್ದೇಶದಿಂದ ಕೂಡಿರಬೇಕು ಹಾಗೂ ಅದನ್ನು ಖಾಸಗಿ ಅಥವಾ ಸರ್ಕಾರಿ ಸಂಸ್ಥೆಯ ಮೂಲಕ ಮಾಡಬೇಕೇ ಎಂಬುದು ತದನಂತರದ ಪ್ರಶ್ನೆಯಾಗುತ್ತದೆ.

ಉಲ್ಲೇಖಗಳು:


೧. ಫಿಯೋರಿ ಜಿ (೧೯೬೫) ''ಆಂಟೊನಿಯೋ ಗ್ರಾಮ್‌ಸ್ಕಿ 'ಲೈಫ್ ಆಫ್ ಎ ರೆವೊಲ್ಯೂಷನರಿ (೧೯೬೫)'

೨. ಕರೋಪಾಡಿ, ಡಿಡಿ (೨೦೧೪) ''ಡಸ್ ಸ್ಕೂಲ್ ಚಾಯ್ಸ್ ಹೆಲ್ಪ್ ರೂರಲ್ ಚೆಲ್ಡ್ರನ್ ಫ್ರಮ್ ಡಿಸ್‌ಅಡ್ವಾಂಟೇಜ್ಡ್ ಸೆಕ್ಷನ್ಸ್? ಎವಿಡೆನ್ಸ್ ಫ್ರಮ್ ಲಾಂಜಿಟ್ಯೂಡಿನಲ್ ರಿಸರ್ಚ್ ಇನ್ ಆಂಧ್ರ ಪ್ರದೇಶ್'

೩. ಮುರಲೀಧರನ್, ಕೆ ಅಂಡ್ ಸುಂದರಾಮನ್, ವಿ (೨೦೧೫) 'ದಿ ಅಗ್ರಿಗೇಟ್ ಎಫೆಕ್ಟ್ ಆಫ್ ಸ್ಕೂಲ್ ಚಾಯ್ಸ್: ಎವಿಡೆನ್ಸ್ ಫ್ರಮ್ ಎ ಟೂ–ಸ್ಟೇಜ್ ಎಕ್ಸ್‌ಪೆರಿಮೆಂಟ್ ಇನ್ ಇಂಡಿಯಾ' ಕ್ವಾರ್ಟರ್ಲಿ ಜರ್ನಲ್ ಆಫ್ ಎಕನಾಮಿಕ್ಸ್ – ೨೦೧೩, ವಾಲ್ಯೂಮ್ – ೧೩೦, ನಂ ೩, ಪಿಪಿ – ೧೦೧೧ – ೬೬

೪. ಶ್ರೀವಾಸ್ತವ, ಪಿಎಡ್ (೨೦೧೩) ''ಲೋ–ಫೀ ಪ್ರೈವೇಟ್ ಸ್ಕೂಲಿಂಗ್: ಅಗ್ರವೇಟಿಂಗ್ ಈಕ್ವಿಟಿ ಆರ್ ಮಿಟಿಗೇಟಿಂಗ್ ಡಿಸ್‌ಅಡ್ವಾಂಟೇಜ್?' ಸಿಂಪೋಸಿಯಂ ಬುಕ್ಸ್ ಲಿ. ೨೦೧೩.

ಅರ್ಜುನ್ ಜಯದೇವ ಅವರು ಬಾಸ್ಟನ್‌ನ ಯೂನಿವರ್ಸಿಟಿ ಆಫ್ ಮಸಾಚುಸೆಟ್ಸ್‌ನಲ್ಲಿ ಎಕನಾಮಿಕ್ಸ್‌ನ ಅಸೋಸಿಯೇಟ್ ಪ್ರೊಫೆಸರ್ ಆಗಿದ್ದಾರೆ; ಅವರು ಬೆಂಗಳೂರಿನ ಅಜೀಂ ಪ್ರೇಮ್‌ಜಿ ಯೂನಿವರ್ಸಿಟಿಯಲ್ಲಿ ಆಡ್‌ಜುಂಕ್ಟ್ ಫ್ಯಾಕಲ್ಟಿಯೂ ಆಗಿದ್ದಾರೆ. ಅವರು ಇನ್‌ಸ್ಟಿಟ್ಯೂಟ್ ಆಫ್ ನ್ಯೂ ಎಕನಾಮಿಕ್ ಥಿಂಕಿಂಗ್ ನಲ್ಲಿ ನಿಕಟವಾಗಿ ಕಾರ್ಯಪ್ರವೃತ್ತರಾಗಿದ್ದಾರೆ. ಅವರು ಆಮ್‌ಹರ್ಸ್ಟ್‌ನ ಮಸಾಚುಸೆಟ್ಸ್ ಯೂನಿವರ್ಸಿಟಿಯಿಂದ ಆರ್ಥಿಕ ವಿಷಯದಲ್ಲಿ ಪಿಎಚ್‌ಡಿ ಪದವಿ ಪಡೆದಿದ್ದಾರೆ. ಅವರನ್ನು ಈ ವಿಳಾಸದಲ್ಲಿ ಸಂಪರ್ಕಿಸಬಹುದು: